ಹೇಳಿದೆ. 'ಆತನೊಂದಿಗೆ ಬಾಳಲು ಸಾಧ್ಯವೇ ಇಲ್ಲ. ಬೇಗ ಡೈವೋರ್ಸ್ ಬೇಕು, ಒಂದಿಷ್ಟು ಪರಿಹಾರದ ಹಣ ಕೊಡಿಸಿ ನನ್ನ ಕಾಲ ಮೇಲೆ ನಾನು ನಿಲ್ತೇನೆ.'

ಡೈವೋರ್ಸ್ ಸಿಕ್ಕಿತು. ಐದು ಲಕ್ಷ ಪರಿಹಾರ ನೀಡಿ ವಿಶ್ವನಾಥ ನನ್ನಿಂದ ದೂರವಾದ. ಅಪ್ಪ ಅಮ್ಮ ನನ್ನ ಸಂಪರ್ಕ ಕಡಿದುಕೊಂಡರು. ವಿಷಯ ತಿಳಿದು ವಿಶ್ವನಾಥನ ಅಣ್ಣ ಗಿರೀಶ್ ಭಾವ ಧಾವಿಸಿ ಬಂದರು. 'ವಿಶ್ವನ ಸ್ನೇಹಿತ ದಿವಾಕರ ಹೇಳ್ದ. ನಿನ್ನನ್ನು ಕರೆದೊಯ್ತೇನೆ' ಎಂದು ದಾವಣಗೆರೆಗೆ ಕರೆದೊಯ್ದರು. ಸುಮಿತ್ರಕ್ಕ, ಗೌರಕ್ಕ ತಬ್ಬಿ ತಾಯಿಯ ಪ್ರೀತಿ ಕೊಟ್ಟರು. ಗಿರೀಶ ಭಾವ ಪ್ರೈಮರಿ ಸ್ಕೂಲ್ ಟೀಚರ್. ಆಸ್ತಿ ಪಾಲಾದ ನಂತರ ಅದನ್ನು ಮಾರಿ ದಾವಣಗೆರೆಯಲ್ಲಿ ಮನೆ ಕಟ್ಟಿಸಿ ಹೆಂಡತಿ ಸುಮಿತ್ರಕ್ಕ, ಇಬ್ಬರು ಮಕ್ಕಳೊಡನೆ ನೆಲೆಸಿದ್ದರು. ಅವರ ಅಕ್ಕ ಗೌರಕ್ಕ ವಿಧವೆಯಾಗಿ ತವರಿನಲ್ಲೇ ಇದ್ದರು.

ಗಿರೀಶ್ ಭಾವ, ವಿಶ್ವನಾಥ ಮತ್ತು ಗೌರಕ್ಕರ ತಂದೆ ಅತ್ತಿಗೆರೆಯಲ್ಲಿ ಶ್ರೀಮಂತ ಜಮೀನ್ದಾರರು. ಅವರ ಹೆಂಡತಿ ತುಂಬಾ ಸುಂದರಿ. ಅದೇನಾಯ್ತೋ ಏನೋ, ತಮ್ಮ ಗಂಡ, ಮೂವರು ಪುಟ್ಟಮಕ್ಕಳನ್ನು ಬಿಟ್ಟು ಯಾರೊಡನೆಯೋ ಓಡಿಹೋದರಂತೆ. ನಂತರ ವಾಪಸ್ ಬಂದು ಆತನೊಟ್ಟಿಗೇ ರಾಜಾರೋಷವಾಗಿ ಬದುಕಿದ್ದರಂತೆ. ಕುಸಿದು ಹೋದ ಮಾವ ಕೊರಗಿ ನವೆದು ಸನ್ಯಾಸಿಯಂತೆ ಬದುಕಿದರಂತೆ. ಮಗಳಿಗೆ ಮದುವೆ ಮಾಡಿ, ಹಿರಿಯ ಮಗ ಮೇಷ್ಟ್ರಾಗಿ, ಎರಡನೇ ಮಗ ಎಂಜಿನಿಯರಾಗಿ ತಮ್ಮ ಕಾಲ ಮೇಲೆ ನಿಂತೊಡನೆ ನೇಣು ಹಾಕಿಕೊಂಡು ಸತ್ತರಂತೆ. ನನಗೆ ಗೊತ್ತಿರಲಿಲ್ಲ. ಗೌರಕ್ಕ ಹೇಳಿದ ಕತೆ ಕೇಳಿ ವಿಶ್ವನಾಥನ ವರ್ತನೆಗೆ ಕಾರಣವೂ ಸಿಕ್ಕಿತ್ತು.

ಅವಿ ಹುಟ್ಟಿದ. ಹೆಣ್ಣೋ ಗಂಡೋ ನನಗೊಂದು ಮಗು ಬೇಕಿತ್ತು. 'ಮಗು ಇಲ್ಲಿರಲಿ. ನೀನು ಮುಂದೆ ಓದು' ಎಂದು ಭಾವ ಧೈರ್ಯ ತುಂಬಿದರು. ನಾನು ಬಿಸಿಎ ನಂತರ ಎಂಸಿಎ ಓದಿದೆ. ಬೆಂಗಳೂರಿನ ಕಂಪನಿಯಲ್ಲಿ ಕೆಲಸ ಸಿಕ್ಕಿ ನೆಲೆ ನಿಲ್ಲುವ ಹೊತ್ತಿಗೆ ಮಗ ಅವಿಯೂ ಯುಕೆಜಿ ಮುಗಿಸಿದ್ದ. ಗೌರಕ್ಕ ನನ್ನೊಡನೆ ಬೆಂಗಳೂರಿಗೆ ಬಂದು ನೆಲಸಿದರು. ಅವಿಗೀಗ ಹನ್ನೆರಡು ವರ್ಷ. ವಿಶ್ವನಾಥ ನನ್ನ ಬದುಕಿನಲ್ಲಿ ಮತ್ತೆಂದೂ ಸುಳಿಯಲಿಲ್ಲ. ಮತ್ತೊಂದು ಮದುವೆಯಾಗಿದ್ದಾನೆ. ಆಕೆಯೂ ಎಂಜಿನಿಯರ್. ಈಗ ಕೆನಡಾದಲ್ಲಿದ್ದಾನೆ ಎಂದು ಅವನ ಗೆಳೆಯ ದಿವಾಕರ ಹೇಳಿದ್ದ. ಅವನು ನನ್ನ ಪಾಲಿಗೆ ಎಂದೋ ಸತ್ತು ಹೋದ. ನಾನು ಅವಿ, ಗೌರಕ್ಕ ಬದುಕು ಕಟ್ಟಿಕೊಂಡಿದ್ದೆವು.

ಅಪ್ಪಅಮ್ಮ ಹೇಗೇ ವರ್ತಿಸಲಿ ನಾನು ಜವಾಬ್ದಾರಿಯಿಂದ ನೋಡಿಕೊಂಡೆ. ಗೌರಕ್ಕನೂ ಜವಾಬ್ದಾರಿ ಹೊತ್ತರು. ಅಮ್ಮನ ಬಿಪಿಗೂ ಟ್ರೀಟ್ಮೆಂಟ್ ಕೊಡಿಸಿದ್ದೆ. ಬಿಡಿಗಾಸೂ ಅವರಿಂದ ಪಡೆಯಲಿಲ್ಲ. ತಿಂಗಳಾಗುವ ವೇಳೆಗೆ ರಾಜಶೇಖರ ಮಾವ ಬಂದರು. 'ಹೇಗಿದ್ದೀರಿ ಭಾವಾ? ಸದ್ಯ ಮೈತ್ರಿ ಎಲ್ಲಾ ಜವಾಬ್ದಾರಿ ಹೊತ್ತಿದ್ದಾಳೆ. ಶಾಭಾಷ್ ಮೈತ್ರಿ' ಅಂದರು.



ಅಮ್ಮ 'ರಾಜಾ, ತುಂಬಾ ಸೋತಿದ್ದೀನಿ ಕಣೋ. ಹೆಣ್ಣುಮಕ್ಕಳ ಮನೇಲಿ ಇರಕ್ಕಾಗಲ್ಲ. ನೀನು ನನ್ನ ತಮ್ಮ. ಅದು ನನ್ನ ತವರುಮನೆ. ನಮ್ಮನ್ನು ಕರ್ಕೊಂಡು ಹೋಗೋ' ಅಂತ ಬಿಕ್ಕಿಬಿಕ್ಕಿ ಅತ್ತಳು. ಅಪ್ಪನೂ ದೀನಮುಖದಲ್ಲಿ ಅವರನ್ನೇ ನೋಡುತ್ತಿದ್ದರು.

ರಾಜಶೇಖರ ಮಾವ, 'ಅದೆಲ್ಲಾ ಆಮೇಲೆ. ಮೊದಲು ಸುಧಾರಿಸಿಕೊಳ್ಳಿ' ಅಂದವರೇ ನನ್ನ ಹಿಂದೆ ಅಡುಗೆಮನೆಗೆ ಬಂದು, 'ಮೈತ್ರಿ, ಡಾಕ್ಟರ್ ಏನೆಂದರು? ಏನೇನಾಯ್ತು ವಿವರವಾಗಿ ಹೇಳು. ಎಲ್ಲಿ ಒಂದ್ಲೋಟ ಕಾಫಿ ಕೊಡು' ಅಂದರು.

'ಮೈತ್ರಿ, ಸುಮಾನಿಗೆ ತುಂಬಾ ಓದಬೇಕು ಅಂತ ಆಸೆ ಇತ್ತಂತೆ. ಅಪ್ಪಅಮ್ಮ ಓದಿಸಲಿಲ್ಲ. ಹೆಣ್ಣು ಅಂತ ಹೀಗಳೆದು ನಮ್ಮನ್ನು ಪ್ರೀತಿಯಿಂದ ಬೆಳೆಸಲೂ ಇಲ್ಲ. ನಾವೆಂದರೆ ಅವರಿಗೆ ಕಾಲುಕಸ ಅಂತ ಅವಳಿಗೆ ಇವರ ಬಗ್ಗೆ ದ್ವೇಷ. ನಾನು ಬಂದಾಗೆಲ್ಲ ತವರಿಗೆ ಬರಲಿಲ್ಲ. ಬಾಣಂತನಕ್ಕೂ ಬರಲಿಲ್ಲ. ಅವರನ್ನು ಕಂಡರೂ